ಶ್ರೀ ರಾಮಕೃಷ್ಣ ಹೆಗ್ಗಡೆ.—ಆಂಧ್ರದವರಿಗೆ ಅಡ್ವೈಸ್ ಮಾಡುವ ಶಕ್ತಿ ನನಗೆ ಇಲ್ಲ. ಆಂಧ್ರದವರು ಈ ವಿಚಾರದಲ್ಲಿ ಯಾವ ಕ್ರಮವನ್ನು ಕೈಕೊಂಡಿದ್ದಾರೆ ಅದೇ ತರಹ ಕ್ರಮವನ್ನು ಇನ್ನಷ್ಟು ಉಗ್ರವಾದ ರೂಪದಲ್ಲಿ ನಮ್ಮ ಜನರು ಕೈಕೊಳ್ಳಬಲ್ಲರು. ಆದರೆ ನಮ್ಮ ಜನರ ಸಂಸ್ಕೃತಿ ಮತ್ತು ನಮ್ಮ ಜನರ ಮನೋವೃತ್ತಿ ಇವು ಇನ್ನೂ ಎರೆಗೆ ಆ ತರಹ ಕೆಲಸವನ್ನು ಮಾಡಲಕ್ಕೆ ಬಿಟ್ಟಿಲ್ಲ, ಅದಕ್ಕಾಗಿ ನಮಗೆ ಅಸಮಾಧಾನ ಇಲ್ಲ. ಈಗ ದುರ್ಧೈವದಿಂದ ನಮ್ಮ ದೇಶದಲ್ಲಿ ಯಾವ ಕೆಲಸವನ್ನು ಮಾಡಿಕೊಳ್ಳಬೇಕಾದರೂ, ಈ ತರಹ ಒಂದು ಚಳವಳಾತ್ಮಕ ಕ್ರಮವನ್ನು ಕೈಗೊಳ್ಳಬೇಕಾದುದು ಒಂದು ಪವೃತ್ತಿಯಾಗಿದೆ. ಡೆಮಾಕ್ರೆಸಿಯಲ್ಲಿ ಇದಕ್ಕೂ ಕೂಡ ಸ್ವಲ್ಪ ಮಟ್ಟಿಗೆ ಸ್ಥಾನ ಇದೆ. ಆದರೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ದೊಡ್ಡ ದೊಡ್ಡ ಕಾರ್ಯಗಳನ್ನು ಈ ಚಳವಳಿ ಆಧಾರದ ಮೇಲೆ, ಚಳವಳಿ ಪ್ರಭಾವದಿಂದ ಪ್ರೇರಿತರಾಗಿ ಕೇಂದ್ರ ಸರ್ಕಾರವಾಗಲಿ, ಪ್ಲಾನಿಂಗ್ ಕಮೀಷನ್ ಆಗಲಿ ನಿರ್ಧಾರವನ್ನು ತೆಗೆದುಕೊಳ್ಳುವುದಾದರೆ ಆಮೇಲೆ ಅದಕ್ಕೆ ಯಾವ ಅರ್ಥ, ಯಾವ ವಿವೇಕ ಇದೆ ಎಂದು ನಾನು ಭಾವಿಸುವುದಿಲ್ಲ. ಬಂದರು ಪ್ರಶ್ನೆ ಬಂದಾಗ ಮಂಗಳೂರಿನಲ್ಲಿ ಮಾಡಬೇಕೇ ಮತ್ತೊಂದು ಕಡೆಯಲ್ಲಿ ಮಾಡಬೇಕೇ ಎನ್ನುವುದನ್ನು ಎಜಿಟೇಷನ್ ಮುಖಾಂತರ ನಿರ್ಧರಿಸುವುದು ಸಾಧ್ಯವಿಲ್ಲ. ಇದರಂತೆಯೇ ಉಕ್ಕಿನ ಕಾರ್ಖಾನೆ. ಆದುದರಿಂದ, ಕೇಂದ್ರ ಸರ್ಕಾರ ಮತ್ತು ಪ್ಲಾನಿಂಗ್ ಕಮೀಷನ್ ಈ ವಿಚಾರದಲ್ಲಿ ನಷ್ಟಕ್ಷಪಾತದಂಥ ರೀತಿಯಿಂದ ಯಾವುದೇ ಪ್ರಭಾವಕ್ಕೆ ಒಳಗಾಗದೆ ಯಾವುದೇ ರೀತಿಯ ಹೊರಗಿನ ಒತ್ತಾಯಕ್ಕೆ ಒಳಗಾಗದೆ ನಿರ್ಣಯ ತೆಗೆದುಕೊಳ್ಳುತ್ತಾರೆ ಎಂದು ನನಗೆ ಸಂಪೂರ್ಣವಾದ ಭರವಸೆ ಇದೆ. ಶ್ರೀ ಕೃಷ್ಣರವರು ಅವರ ಭಾಷಣದಲ್ಲಿ ಒಂದು ಮಾತು ಹೇಳುತ್ತಾ, ನಮ್ಮ ಪ್ರಧಾನ ಮಂತ್ರಿಗಳಿಗೆ ಅಭಿನಂದನೆ ಕೊಟ್ಟರು. ಅದು ಏನೆಂದರೆ, ಪ್ರಧಾನ ಮಂತ್ರಿಗಳು ಈ ವಿಚಾರದಲ್ಲಿ ತಾನು ಯಾವ ರೀತಿ ಒತ್ತಾಯಕ್ಕೂ ಪ್ರಭಾವಕ್ಕೂ ಮಣಿಯುವುದಿಲ್ಲ ಎಂದು ಏನು ಹೇಳಿದ್ದಾರೆ, ಅದನ್ನು ಸ್ವಾಗತಿಸುತ್ತೇನೆ ಎಂದು ಹೇಳಿದರು. ಅವರು ಹೇಳಿದಂಥಾ ಮಾತು ನಮಗೆಲ್ಲರಿಗೂ ವಿಶೇಷ ಬಲವನ್ನು ಕೊಟ್ಟಿದೆ. ಆಂಗ್ಲೊ ಅಮೇರಿಕನ್ ಕನ್‌ಸಾರ್ಟಿಯಂರವರು ತಮ್ಮ ರಿಪೋರ್ಟ್‌ನಲ್ಲಿ ಬಶಾಖಪಟ್ಟಣ ಮೇಲು, ಹೊಸಪೇಟೆ ಕೀಳು ಎನ್ನತಕ್ಕ ಮಾತನ್ನು ಹೇಳಲಿಲ್ಲ. ಅವನ್ನು ಕೂಡ ಗಮನದಲ್ಲಿ ಇಡಬೇಕು. ಸಮುದ್ರದ ದಂಡೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವುದಾದರೆ, ವಿಶಾಖಪಟ್ಟಣ ಒಳ್ಳೆಯದು ಎಂದು ಅವರು ಹೇಳಿದ್ದಾರೆ ಮತ್ತು, ಒಳನಾಡಿನಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವುದಾದರೆ ಹೊಸಪೇಟೆ ಅತ್ಯುತ್ತಮ ಸ್ಥಾನ ಎಂದು ಹೇಳಿದ್ದಾರೆ. ಆದುದರಿಂದ ಕೇಂದ್ರ ಸರ್ಕಾರ ಈ ವಿಚಾರದಲ್ಲಿ ನಾವು ಹೊಸಪೇಟೆ ಬಗ್ಗೆ ಸಿದ್ಧ ಮಾಡಿದಂಥ ವರದಿಯನ್ನು ಪರ್ಯಾಲೋಚಿಸಿ, ಹೊಸಪೇಟೆಯಲ್ಲಿ ತಯಾರಾದಂಥ ಉಕ್ಕು ಅತಿ ಕಡಿಮೆ ಖರ್ಚಿನದು ಆಗುತ್ತದೆ ಎನ್ನುವ ಮಾತನ್ನು ಮನಗಂಡು, ಹೊಸಪೇಟೆಯಲ್ಲಿ ಈ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಲಕ್ಕೆ ಕೊನೇ ತೀರ್ಮಾನ ಮಾಡುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಯಾರು ತಂದಿದ್ದಾರೋ ಅವರು ಮೈಸೂರಿಗೆ ಒಂದು ದೊಡ್ಡ ಸೇವೆ ಮಾಡಿದ್ದಾರೆ ಮತ್ತು ಇದರ ಮೂಲಕ ಸರ್ಕಾರದ ಕೈಯ್ಯನ್ನು ಇನ್ನಷ್ಟು ಬಲಗೊಳಿಸಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ ಮತ್ತು ಇದಕ್ಕಾಗಿ ಅವರನು ಅಭಿನಂದಿಸುತ್ತೇನೆ. ಈ ಮಾತುಗಳೊಂದಿಗೆ ನಾನು ಈ ನಿರ್ಣಯವನ್ನು ಸ್ವಾಗತಿಸುತ್ತೇನೆ.

Mr. SPEAKER.—I shall put the Resolution to the vote of the House. The question is :

> "That this Assembly strongly urges on the Government of India that the V Steel Plant be located at Hospet, in Mysore State."

The motion was adopted unanimously.

PAPERS LAID ON THE TABLE

† Sri S. R. KANTHI (Minister for Education).—Sir, I beg to inform the House that the Report of the Committee to examine the administration of schools at the district level has been circulated to Members. To-day it may be collected from the pigeonholes.